# ಕುವೆಂಪು ವಿಶ್ವವಿದ್ಯಾಲಯ

ಕುಲಸಚಿವ(ಪರೀಕ್ಷಾಂಗ)ರವರ ಕಛೇರಿ, ಜ್ಞಾನ ಸಹ್ಯಾದ್ರಿ, ಶಂಕರಘಟ್ಟ – 577451

ದೂರವಾಣಿ ಸಂಖ್ಯೆ: 08282–256166:ಇ–ಮೇಲ್:regexamku@gmail.com


ಸಂಖ್ಯೆ:ಕುವಿ:ಪವಿ:ಎಸ್‌ಪಿ–1: 5064 :2023–24 ದಿನಾಂಕ:30–09–2023

## ಸುತ್ತೋಲೆ

**ವಿಷಯ:** ಆಂತರಿಕ ಕಿರು ಪರೀಕ್ಷಾ ಉತ್ತರ ಪತ್ರಿಕೆಗಳ ಬೇಡಿಕೆ ಪಟ್ಟಿಯನ್ನು ಸಲ್ಲಿಸುವ ಕುರಿತು.

*****

2023–24ನೇ ಸಾಲಿನಲ್ಲಿ ಸ್ನಾತಕ ಪದವಿಗಳ 01, 03, ಮತ್ತು 05ನೇ ಸೆಮಿಸ್ಟರ್‌ನಲ್ಲಿ ನಡೆಸಬೇಕಾಗಿರುವ ಆಂತರಿಕ ಕಿರು ಪರೀಕ್ಷೆಗಳಿಗೆ ಬೇಕಾಗುವ ಒಟ್ಟು ಆಂತರಿಕ ಕಿರು ಪರೀಕ್ಷಾ ಉತ್ತರಪತ್ರಿಕೆಗಳ ಬೇಡಿಕೆ ಪಟ್ಟಿಯನ್ನು ಈ ಕೆಳಕಂಡ ನಮೂನೆಯಲ್ಲಿ ಕೂಡಲೇ ವಿಶ್ವವಿದ್ಯಾಲಯಕ್ಕೆ ಸಲ್ಲಿಸಲು ಹಾಗೂ ಸದರಿ ಉತ್ತರಪತ್ರಿಕೆಗಳ ದಾಸ್ತಾನು ಇದ್ದಲ್ಲಿ ಸರಬರಾಜು ಬೇಡವೆಂದು ತಿಳಿಸತಕ್ಕದ್ದು.

| ಪ್ರಸ್ತುತ ತಮ್ಮ ಕಾಲೇಜಿನಲ್ಲಿ ಉಳಿದಿರುವ ಆಂತರಿಕ ಕಿರು ಪರೀಕ್ಷೆ/ ಪ್ರಾಯೋಗಿಕ ಪರೀಕ್ಷಾ ಉತ್ತರ ಪತ್ರಿಕೆಗಳ ಪ್ರಮಾಣ. | ಪ್ರಸ್ತುತ ಆಂತರಿಕ ಕಿರು ಪರೀಕ್ಷೆಗಳಿಗೆ ಬೇಕಾಗಿರುವ ಹೆಚ್ಚುವರಿ ಆಂತರಿಕ ಕಿರು ಪರೀಕ್ಷಾ ಉತ್ತರ ಪತ್ರಿಕೆಗಳ ಪ್ರಮಾಣ, |
|---|---|
| | |

1. ವಿಶ್ವವಿದ್ಯಾಲಯದಿಂದ ಸರಬರಾಜು ಮಾಡುವ ಆಂತರಿಕ ಕಿರು ಪರೀಕ್ಷಾ ಉತ್ತರಪತ್ರಿಕೆಗಳನ್ನು ಯಾವುದೇ ಕಾರಣಕ್ಕೂ ಸ್ನಾತಕೋತ್ತರ ಪದವಿಗಳ ಆಂತರಿಕ ಕಿರು ಪರೀಕ್ಷೆಗಳಿಗೆ ಉಪಯೋಗಿಸಬಾರದು. (ಸ್ನಾತಕೋತ್ತರ ಪದವಿಗಳನ್ನು ಹೊಂದಿರುವ ಸ್ನಾತಕ ಕಾಲೇಜುಗಳಲ್ಲಿ)
2. ವಿದ್ಯಾರ್ಥಿಗಳು ಬರೆದಿರುವ ಆಂತರಿಕ ಕಿರು ಪರೀಕ್ಷಾ ಉತ್ತರಪತ್ರಿಕೆಗಳನ್ನು 06 (ಆರು) ತಿಂಗಳವರೆಗೆ ತಮ್ಮ ಕಾಲೇಜಿನಲ್ಲಿಯೇ ಸಂಗ್ರಹಿಸಿಟ್ಟುಕೊಂಡು ಆ ನಂತರ ವಿಶ್ವವಿದ್ಯಾಲಯಕ್ಕೆ ಹಿಂದಿರುಗಿಸುವುದು.
3. ಪ್ರತಿ ಸೆಮಿಸ್ಟರ್‌ನಲ್ಲಿ ಜರುಗುವ ಸೈದ್ಧಾಂತಿಕ ಹಾಗೂ ಆಂತರಿಕ ಕಿರು/ಪ್ರಾಯೋಗಿಕ ಪರೀಕ್ಷೆಗಳು ಮುಗಿದ ನಂತರ ಕಾಲೇಜಿನಲ್ಲಿ ಉಳಿದಿರುವ ಸೈದ್ಧಾಂತಿಕ ಹಾಗೂ ಆಂತರಿಕ ಕಿರು/ಪ್ರಾಯೋಗಿಕ ಪರೀಕ್ಷಾ ಉತ್ತರಪತ್ರಿಕೆಗಳ ಲೆಕ್ಕವನ್ನು ತಪ್ಪದೇ ವಿಶ್ವವಿದ್ಯಾಲಯಕ್ಕೆ ಸಲ್ಲಿಸುವುದು.

6/10/23

ಕುಲಸಚಿವರು(ಪರೀಕ್ಷಾಂಗ)
ಕುವೆಂಪು ವಿಶ್ವವಿದ್ಯಾಲಯ
ಜ್ಞಾನಸಹ್ಯಾದ್ರಿ, ಶಂಕರಘಟ್ಟ–577 451

**ಇವರಿಗೆ,**

**ವಿಶ್ವವಿದ್ಯಾಲಯದ ವ್ಯಾಪ್ತಿಗೊಳಪಡುವ ಎಲ್ಲಾ ಸ್ನಾತಕ ಕಾಲೇಜುಗಳ ಪ್ರಾಂಶುಪಾಲರುಗಳಿಗೆ,**

**ಪ್ರತಿಗಳು**

1. ಆಪ್ತಶಾಖೆ, ಕುಲಸಚಿವರು(ಪರೀಕ್ಷಾಂಗ), ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
2. ಉಪಕುಲಸಚಿವರು(ಪರೀಕ್ಷಾಂಗ), ಪರೀಕ್ಷಾ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
3. ಕಛೇರಿ ಪ್ರತಿ.

Circular 1